# ಉಪ-ತಹಶೀಲ್ದಾರರು, ನಾಡಕಾರ್ಯಾಲಯ, ತೆಕ್ಕಲಕೋಟೆ.

# ಇವರ ನ್ಯಾಯಾಲಯದಲ್ಲಿ

| ವಾದಿಗಳು: | ವಿರುದ್ಧ: | ಪ್ರತಿವಾದಿಗಳು |
|---|---|---|
| ಬಸವರಾಜ ಗೌಡ<br>ತಂದೆ: ಓಂಕಾರ ರೆಡ್ಡಿ<br>ಹಾವಿನಹಾಳು ಗ್ರಾಮ, | | 1)ಎಸ್.ಜಡಿಯಪ್ಪ ತಂದೆ: ದೊಡ್ಡನಗೌಡ<br>2)ಎಸ್.ಬಸವರಾಜ ತಂದೆ: ದೊಡ್ಡನಗೌಡ<br>ವಾರ್ಡ್ ನಂ.21, 3ನೇ ಅಡ್ಡರಸ್ತೆ, ಎರ್ರಿತಾತ ಕಾಲೋನಿ, ಗಾಂಧಿ ನಗರ, ಬಳ್ಳಾರಿ. |

** ** **

| ಕ್ರ.ಸಂ. | ತಾಲೂಕು | ಹೋಬಳಿ | ಗ್ರಾಮ | ಸರ್ವೆ ನಂಬರು | ವಿಸ್ತೀರ್ಣ: | ತರಂ |
|---|---|---|---|---|---|---|
| 01 | ಸಿರುಗುಪ್ಪ | ತೆಕ್ಕಲಕೋಟೆ | ಹಾವಿನಹಾಳು | 3/B | 0-26 | - |
| 02 | ಸಿರುಗುಪ್ಪ | ತೆಕ್ಕಲಕೋಟೆ | ಹಾವಿನಹಾಳು | 4/D | 0-53 | - |
| 03 | ಸಿರುಗುಪ್ಪ | ತೆಕ್ಕಲಕೋಟೆ | ಹಾವಿನಹಾಳು | 12/A | 2-63 | - |
| 04 | ಸಿರುಗುಪ್ಪ | ತೆಕ್ಕಲಕೋಟೆ | ಹಾವಿನಹಾಳು | 13/A | 1-05 | - |
| 05 | ಸಿರುಗುಪ್ಪ | ತೆಕ್ಕಲಕೋಟೆ | ಹಾವಿನಹಾಳು | 20/B | 2-28 | - |

**ಪೀಠಿಕೆ** :-

ಸಿರುಗುಪ್ಪ ತಾಲೂಕು, ತೆಕ್ಕಲಕೋಟೆ ಹೋಬಳಿ, ಹಾವಿನಹಾಳು ಗ್ರಾಮದ ಮೇಲ್ಕಾಣಿಸಿದ ಜಮೀನುಗಳ ಹಕ್ಕು ಬದಲಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕ: 08-01-2016ರಂದು ಭೂಮಿ ಕೇಂದ್ರ ಸಿರುಗುಪ್ಪದಲ್ಲಿ ಪೋತಿ ವಾರಸು ಪ್ರಕಾರ ಹಕ್ಕು ಬದಲಾವಣೆಗೆ ಅರ್ಜಿಸಲ್ಲಿಸಿದ್ದು, ಎಸ್.ಜುಡೆಪ್ಪ ತಂದೆ: ದೊಡ್ಡನಗೌಡ ಹಾಗೂ ಎಸ್.ಬಸವರಾಜ ತಂದೆ: ದೊಡ್ಡನಗೌಡ ಇವರು ಅರ್ಜಿಸಲ್ಲಿಸಿರುತ್ತರೆ, ಕಾರಣ ಪೋವಾರಸು ಪ್ರಕಾರ ಹಕ್ಕು ಬದಲಾವಣೆ ಪ್ರಕ್ರಿಯೆ ಜರುಗಿಸಲು ನಮೂನೆ-21, ನೋಟೀಸ್ ತಯಾರಿಸಿ ಕಂದಾಯ ನಿರೀಕ್ಷಕರಿಗೆ ಕಡತವನ್ನು ಕಳುಹಿಸಿ ಕೊಡಲಾಗಿ ಗ್ರಾಮಲೆಕ್ಕಿಗರು ನಮೂನೆ-21 ನೋಟಿಸನ್ನು ಗ್ರಾಮದಲ್ಲಿ ಪ್ರಚುರ ಪಡಿಸಲಾಗಿ ನಿಗದಿತ ಅವಧಿಯಲ್ಲಿ ಆಸಕ್ತಿ ಯುಳ್ಳವರಿಂದ ಆಕ್ಷೇಪಣೆಗಳು ಸ್ವೀಕೃತವಾಗಿರುವುದರಿಂದ ಕಂದಾಯ ನೀರಿಕ್ಷಕರು ತೆಕ್ಕಲಕೋಟೆ ಇವರು ಇದೊಂದು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಕಡತವನ್ನು ಈ ಕಾರ್ಯಾಲಯಕ್ಕೆ ಸಲ್ಲಿಸಿರುತ್ತಾರೆ.

ಸದ್ರಿ ಪ್ರಕರಣವನ್ನು ಈ ಕಾರ್ಯಾಲಯದ ವಿವಾದಾಸ್ಪದ ಪ್ರಕರಣದ ವಹಿಯಲ್ಲಿ ನಮೂದಿಸಿ ಕೊಂಡು ಕರ್ನಾಟಕ ಭೂ ಕಂದಾಯ ಕಾಯ್ದೆ ನಿಯಮಗಳು 1966 ನಿಯಮ 43 ಮತ್ತು 67ರಂತೆ ವಾದಿ ಮತ್ತು ಪ್ರತಿವಾದಿಗಳಿಗೆ ವಿಚಾರಣೆ ದಿನಾಂಕ ನಿಗದಿ ಪಡಿಸಿ ನೋಟೀಸ್ ನೀಡಿ ವಿಚಾರಣೆ ಕೈಗೊಂಡು ಸದ್ರಿ ಪ್ರಕರಣದ ವಿಚಾರಣೆಯನ್ನು ಮುಕ್ತಾಯ ಗೊಳಿಸಲಾಯಿತು.

ವಿಚಾರಣೆ ಸಮಯದಲ್ಲಿ ವಾದಿಗಳು ಮತ್ತು ಪ್ರತಿವಾದಿಗಳು ಹಾಜರಿರುತ್ತಾರೆ, ವಾದಿಗಳು ವಿಚಾರಣಾ ಸಮಯದಲ್ಲಿ ಹಾಜರಾಗಿ ಸದ್ರಿ ಸರ್ವೆನಂಬರಿನ ಹಕ್ಕು ಬದಲಾವಣೆ ವಿಯಷಕ್ಕೆ ಸಂಬಂಧಿಸಿದಂತೆ ನಾವುಗಳು ಊರಿನ ಹಿರಿಯರ ಸಮಕ್ಷಮದಲ್ಲಿ ರಾಜಿಯಾಗಿದ್ದು, ನಮ್ಮ ಸಮಸ್ಯೆಯನ್ನು ಬಗೆಹರಿಸಿ ಕೊಂಡಿರುತ್ತೇವೆ ಹಾಗೂ ನನ್ನ ಭಾಗಕ್ಕೆ ನಗದು ಹಣ ತೆಗೆದು ಕೊಂಡಿರುತ್ತೇನೆ, ಬೇರೆಯವರ ಮಾತು ಕೇಳಿ ತಕರಾರು ಅರ್ಜಿಸಲ್ಲಿಸಿದ್ದು ಈ ತಕರಾರನ್ನು ಹಿಂಪಡೆದಿರುತ್ತೇನೆಂದು 20ರೂಗಳ ಛಾಪಕಾಗದ ಪತ್ರವನ್ನು ಸಹ

ನೀಡಿರುತ್ತಾರೆ. ಹಿಂಪಡೆದಿರುವ ಬಗ್ಗೆ 20ರೂ.ಗಳ ಕೋರ್ಟ್ ಅಫಿಡವಿಟ್‌ಅನ್ನು ಪಡೆದಿರಲಾಗುತ್ತದೆ ಹಾಗೂ ಪ್ರತಿವಾದಿಗಳು ಸದ್ರಿ ಜಮೀನುಗಳು ನನ್ನ ಹಾಗೂ ನನ್ನ ತಾಯಿಯ ಹೆಸರಿನಲ್ಲಿ ಜಂಟಿಯಾಗಿ ಪಟ್ಟಾ ಇರುತ್ತದೆ, ದಿನಾಂಕ 22-02-2011ರಂದು ನನ್ನ ತಾಯಿಯಾದ ಹಂಪಮ್ಮ ಗಂಡ: ದೊಡ್ಡನಗೌಡ ಇವರು ಮರಣ ಹೊಂದಿರುತ್ತಾರೆ, ಕಾರಣ ನನ್ನ ತಾಯಿಯು ಮರಣ ಹೊಂದಿದ್ದರಿಂದ ನನ್ನ ಹಾಗೂ ನನ್ನ ತಮ್ಮನ ಹೆಸರಿಗೆ ಸಲ್ಲಿಸಿರುವ ದಾಖಲೆಗಳ ಮೇರೆಗೆ ಪೌತಿ ವಾರಸುಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ.

ಪ್ರತಿವಾದಿಗಳು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಲಾಗಿ ಪ್ರತಿವಾದಿಗಳ ತಾಯಿಯು ಮರಣ ಹೊಂದಿರುವ ಬಗ್ಗೆ ಮರಣ ಸಮರ್ಥನೆ ಪತ್ರ ಹಾಗೂ ವಂಶವೃಕ್ಷ, ಚುನಾವಣಾ ಗುರುತಿನ ಚೀಟಿಗಳನ್ನು ಸಲ್ಲಿಸಿ ಅರ್ಜಿಸಲ್ಲಿಸಿರುತ್ತಾರೆ ಮತ್ತು ವಾದಿಗಳು ತಮ್ಮ ತಕರಾರನ್ನು ಹಿಂಪಡೆದಿರುವ ಬಗ್ಗೆ 20ರೂಗಳ ಛಾಪಕಾಗದ ಪತ್ರ ನೀಡಿರುತ್ತಾರೆ ಹಾಗೂ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಕಲಂ. 128 ಮತ್ತು 129ರ ಪ್ರಕಾರ ಕ್ರಮ ಕೈಗೊಳ್ಳುವ ಅವಶ್ಯಕತೆ ಇರುವುದರಿಂದ ಈ ಕೆಳಗಿನಂತೆ.

## ಆ ದೇ ಶ

ಸಂ:ಕಂ:ಹ.ಬ.:ವಿವಾದ: 59:2015-16 ದಿನಾಂಕ: 13-06-2016

ಪೀಠಿಕೆಯಲ್ಲಿ ವಿವರಿಸಿದ ಹಿನ್ನಲೆಯಲ್ಲಿ ಹಾಗೂ ದಾಖಲೆಗಳ ಆದಾರದನ್ವಯ ಸಿರುಗುಪ್ಪ ತಾಲೂಕು ತೆಕ್ಕಲಕೋಟೆ ಹೋಬಳಿ, ಹಾವಿನಹಾಳು ಗ್ರಾಮದ ಸರ್ವೆನಂ.**3/B** (ವಿ) 0-26ಸೆಂಟ್ಸ್, ಸರ್ವೆನಂ.**4/D** (ವಿ) 0-53ಸೆಂಟ್ಸ್, ಸರ್ವೆನಂ.**12/A** (ವಿ) 2-63ಎಕರೆ, ಸರ್ವೆನಂ.**13/A** (ವಿ) 1-05ಎಕರೆ, ಸರ್ವೆನಂ.**20/B** (ವಿ) 2-28ಎಕರೆ ಜಮೀನುಗಳನ್ನು ಪೋತಿವಾರಸು ಪ್ರಕಾರ ಪೋತಿ ಪೀ. ತುಂಬಿಕೊಂಡು ಪ್ರತಿವಾದಿಗಳಾದ ಎಸ್.ಜಡೆಪ್ಪ ತಂದೆ:ದೊಡ್ಡನಗೌಡ, ಎಸ್.ಬಸವರಾಜ ತಂದೆ: ದೊಡ್ಡನಗೌಡ ಇವರ ಹೆಸರಿಗೆ ಜಂಟಿಯಾಗಿ ಹಕ್ಕು ಬಲದಾವಣೆ ಮಾಡಲು ಆದೇಶಿಸಿದೆ.

ಸದರಿ ಆದೇಶವನ್ನು ಬೆರಳಚ್ಚು ಮಾಡಿಸಿ ತಪ್ಪುಗಳನ್ನು ಓದಿ ಮಾಡಿ ದಿನಾಂಕ: 13-06-2016 ಆದೇಶಿಸಲಾಯಿತು.

ಉಪ ತಹಶೀಲ್ದಾರರು,
ನಾಡಕಾರ್ಯಾಲಯ
ತೆಕ್ಕಲಕೋಟೆ.

ಪ್ರತಿಯನ್ನು:

1) ವಾದಿ ಮತ್ತು ಪ್ರತಿವಾದಿಗಳಿಗೆ.
2) ಭೂಮಿ ಕೇಂದ್ರ, ತಾಲೂಕು ಕಛೇರಿಗೆ.